ಸದನದಲ್ಲಿ ಉತ್ತರಿಸುವ ಪ್ರಶ್ನೆ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಸೋಮವಾರ, ದಿನಾಂಕ: 15ನೇ ಜುಲೈ, 2019

ಕೃಷಿ ಸಾಲಕ್ಕೆ ಹಣ ಬಿಡುಗಡೆ ಮತ್ತು ಸಾಲ ಮನ್ನಾ ಯೋಜನೆ ಅನುಷ್ಠಾನ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) -

ಡಾ. ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) -

5 (22+124) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ರೈತರ ಸಾಲ ಮನ್ನಾಕ್ಕೆ ಸಂಬಂಧಿಸಿದಂತೆ ಇದುವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸಾಲ ಮನ್ನಾ ಯೋಜನೆಯ ಲಾಭ ಪಡೆಯಲು ವಿಧಿಸಿರುವ ಷರತ್ತುಗಳು ಹಾಗೂ ಮಾನದಂಡಗಳಾವುವು ; ಇಲಾಖೆಗೆ ಯಾವ ಯಾವ ದಾಖಲೆಗಳನ್ನು ಕಡ್ಡಾಯವಾಗಿ ಒದಗಿಸಬೇಕಾಗಿದೆ ;

(ಇ) ಇದುವರೆಗೆ ಎಷ್ಟು ರೈತರ ಸಾಲ ಮನ್ನಾ ಆಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು) ಸಾಲ ಮನ್ನಾ ಯೋಜನೆಯ ಲಾಭ ಪಡೆದ ರೈತ ಫಲಾನುಭವಿಗಳೆಷ್ಟು ; ಸಣ್ಣ ಮತ್ತು ಮಧ್ಯಮ ರೈತರೆಷ್ಟು ;

(ಈ) ರೈತರ ಸಾಲ ಮನ್ನಾ ಮಾಡಲು ಇದುವರೆಗೆ ಎಷ್ಟು ಹಣಕಾಸು ಸಂಸ್ಥೆಗಳಿಗೆ (ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು ಸೇರಿದಂತೆ) ಹಣ ಬಿಡುಗಡೆಯಾಗಿದೆ ; (ಜಿಲ್ಲಾವಾರು, ಬ್ಯಾಂಕ್‌ವಾರು ಮಾಹಿತಿ ನೀಡುವುದು)

(ಉ) ರೈತರಿಗೆ ಕೇಂದ್ರ ಸರ್ಕಾರ ಪ್ರಕಟಿಸಿರುವ ವಾರ್ಷಿಕ ಆರು ಸಾವಿರ ರೂ.ಗಳ ಲಾಭ ಪಡೆಯಲು ಅಗತ್ಯ ಕಂದಾಯ ದಾಖಲೆಗಳಿಲ್ಲದ ರೈತರು ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸೂಕ್ತ ದಾಖಲೆಗಳನ್ನು ರೈತರಿಗೆ ಒದಗಿಸಲು ಕಂದಾಯ ಇಲಾಖೆ ಹಾಗೂ ಬ್ಯಾಂಕ್‌ಗಳೊಂದಿಗೆ ಕೃಷಿ ಇಲಾಖೆ ವಹಿಸಿರುವ ಕ್ರಮಗಳೇನು ; ರೈತರಿಗೆ ಸಾಲ ಮನ್ನಾ ಲಾಭ ತಲುಪಿಸಲು ಬ್ಯಾಂಕ್‌ಗಳು ವಹಿಸುತ್ತಿರುವ ಪಾತ್ರವೇನು ;

(ಊ) ರಾಜ್ಯದಲ್ಲಿ ರೈತರಿಗೆ ಸಾಲ ಮನ್ನಾ ಸೌಲಭ್ಯವನ್ನು ಘೋಷಿಸಿದ ಬಳಿಕ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು ; ಆತ್ಮಹತ್ಯೆಗೆ ಕಾರಣಗಳೇನು ? (ಜಿಲ್ಲಾವಾರು ಮಾಹಿತಿ ನೀಡುವುದು)